







ಕುಟುಂಬದ ಸದಸ್ಯರೊಡನೆ ವಿಹಾರಕ್ಕೆ ತೆರಳಲು ಇಂದೋರಿನ ಸುತ್ತಮುತ್ತ ಇರುವ ಸ್ಥಳಗಳ ಹುಡುಕಾಟದಲ್ಲಿದ್ದಾಗ ದೊರಕಿದ ಒಂದು ಆಕರ್ಷಕ ಆಯ್ಕೆ ಗುಲಾವಟ್‌ನ ತಾವರೆ ಕೊಳ. ಇನ್ನೂ ಬಹುತೇಕ ಅಜ್ಞಾತವಾಗಿಯೇ ಉಳಿದಿರುವ ಈ ತಾಣಕ್ಕೆ ಇಂದೋರ್‌ನಿಂದ ಕಾರಿನಲ್ಲಿ ಪಯಣ ಬೆಳೆಸಿದೆವು. ಹಾತೋಡ್ ಗ್ರಾಮದವರೆಗಿನ ರಸ್ತೆ ಉತ್ತಮವಾಗಿತ್ತು. ಅಲ್ಲಿಂದ ಮುಂದೆ ತಿರುವುಗಳಿಂದ ಕೂಡಿದ, ಕಿರಿದಾದ, ಡಾಂಬರು ಕಾಣದ ರಸ್ತೆಯಲ್ಲಿ ಸುಮಾರು ಆರು ಕಿಲೋಮೀಟರ್ ಕ್ರಮಿಸುವುದು ತ್ರಾಸದಾಯಕ ಎನಿಸಿತು. ಅಷ್ಟರಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಗೋಚರಿಸಿದ ತಾವರೆ ಕೊಳ ಮುದುಡಿದ್ದ ಮನಗಳನ್ನು ಮುದಗೊಳಿಸಿ ಅರಳಿಸಿತು.

ಇನ್ನೂ ಸ್ವಲ್ಪ ಮುಂದೆ ಸಾಗಿದಾಗ ಕಂಡ ದೃಶ್ಯಗಳು ಕಿನ್ನರ ಲೋಕದ ಮರುಸೃಷ್ಟಿ ಎನಿಸುವಂತಿದ್ದವು. ಮರಗಳ ನೆರಳಿನಲ್ಲಿ ಸ್ಥಳೀಯರು ತಮ್ಮ ಜೀವನೋಪಾಯಕ್ಕಾಗಿ ನಿರ್ಮಿಸಿದ್ದ ಅಲಂಕೃತ ಉಯ್ಯಾಲೆಗಳು, ಗುಡಿಸಲುಗಳು, ಗುಡಾರಗಳು, ತಾವರೆ ಹೂವುಗಳಿಂದ ತುಂಬಿದ್ದ ದೋಣಿಗಳು ನೋಡುಗರ ಮನಸೆಳೆಯುವಂತಿದ್ದವು. ಅವುಗಳಲ್ಲಿ ಬಹುತೇಕವು ಚಿತ್ರೀಕರಣಕ್ಕೆಂದೇ ನಿರ್ಮಾಣಗೊಂಡಿದ್ದವು. ಸಾಲಂಕೃತ ಸೈಕಲ್‌ಗಳು ಸಹ ಅಲ್ಲಿದ್ದವು.

ನಿಸರ್ಗ ಸೌಂದರ್ಯದೊಂದಿಗೆ ಮನುಷ್ಯನಿರ್ಮಿತಿ ಚೆಲುವನ್ನು ನೋಡುವಾಗ ಆವರೆಗಿನ ಪ್ರಯಾಣದ ದಣಿವೆಲ್ಲ ಮರೆತುಹೋದಂತೆ ಭಾಸವಾಯಿತು. 'ತಾವರೆ ಕೊಳ' ಸೌಂದರ್ಯದ ಹಲವು ರೂಪಗಳ ಕೊಲಾಜ್‌ನಂತೆ ಕಾಣಿಸಿತು. ವಿಶಿಷ್ಟ ಮಾದರಿಗಳ ಐಷಾರಾಮಿ ಕಾರುಗಳು, ಜೀಪುಗಳು, ಹಾಗು ಮೋಟರ್‌ಸೈಕಲ್‌ಗಳು ಪ್ರವಾಸಿಗರಿಗಾಗಿ ಅಲ್ಲಿ ಕಾದಿದ್ದವು. ಅವುಗಳಲ್ಲಿ ಕುಳಿತು, ಸೇತುವೆಗಳ ಮೇಲೆ ಸಾಗಿ, ವಿಶಾಲವಾದ ಕೊಳದ ಸೌಂದರ್ಯವನ್ನು ಸವಿಯಬಹುದು; ಛಾಯಾಚಿತ್ರಗಳನ್ನು ತೆಗೆಸಿಕೊಳ್ಳಬಹುದು. ಶುಲ್ಕ ಸ್ವಲ್ಪ ದುಬಾರಿ ಅಷ್ಟೆ. ನಾವು ಅಲ್ಲಿಗೆ ಭೇಟಿಯಿತ್ತಾಗ ದೋಣಿವಿಹಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು.

ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗಿರುವ ವಿವಾಹಪೂರ್ವ ಛಾಯಾಚಿತ್ರ / ವಿಡಿಯೊ ಚಿತ್ರೀಕರಣಕ್ಕೆ ಹೇಳಿ ಮಾಡಿಸಿದಂತಿದೆ ಈ ಸ್ವರ್ಗಸದೃಶ ತಾಣ. ಹಾಗಾಗಿ ಈ ಉದ್ದೇಶದಿಂದ ಇಲ್ಲಿಗೆ ಬರುವ ಯುವಜೋಡಿಗಳ ಹಾಗೂ ಚಿತ್ರೀಕರಣ ತಂಡಗಳ ಸಂಖ್ಯೆ ಅಧಿಕವಾಗುತ್ತಿದೆಯೆಂದು ತಿಳಿಯಿತು.

ಕೆಲವು ವರ್ಷಗಳ ಹಿಂದೆ ಇಲ್ಲಿನ ಸೇತುವೆಯ ಬಳಿ ಹನುಮನ ಉದ್ಭವ ಮೂರ್ತಿಯೊಂದು ಸಿಕ್ಕಿತಂತೆ. ಅದಕ್ಕೊಂದು ಮಂದಿರ ನಿರ್ಮಿಸಿದ್ದಾರೆ; ವಿಗ್ರಹವನ್ನು ಅದರಲ್ಲಿ ಪ್ರತಿಷ್ಠಾಪಿಸಿದ್ದಾರೆ; ಅದಕ್ಕೆ ಪೂಜೆ ಸಲ್ಲಿಸಲು ಅರ್ಚಕರಿದ್ದಾರೆ. ಹಾಗಾಗಿ ಸೌಂದರ್ಯೋಪಾಸಕರ ಜೊತೆಗೆ ಆಸ್ತಿಕರಿಗೂ ತಾವರೆ ಕೊಳ ಹೇಳಿಮಾಡಿಸಿದ ಸ್ಥಳ.

ತಿಂಡಿ ತೀರ್ಥಗಳನ್ನು ವಿಕ್ರಯಿಸುವ ಅರೆಕಾಲಿಕ ಅಂಗಡಿಗಳು ಕೊಳದ ಆಸುಪಾಸಿನಲ್ಲಿವೆ. ಆದರೆ, ಅಲ್ಲೆಲ್ಲ ವ್ಯಾಪಾರದ ಭರಾಟೆಯೇ ಹೆಚ್ಚು. ಗುಣಮಟ್ಟದ ಬಗ್ಗೆ ಖಾತರಿಯಿಲ್ಲ. ಮೂಲಭೂತ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ.

ನೀಲಗಿರಿ ಮರಗಳು, ಬಿದಿರಿನ ಮೆಳೆಗಳು, ಹಾಗು ಇತರ ಹಸಿರು ವೃಕ್ಷಗಳಿಂದ ಕೂಡಿರುವ ಕಾನನದ ನಡುವೆ ಅನೇಕ ಕೊಳಗಳಿವೆ. ಯಶವಂತ್ ಸಾಗರ್ ಅಣೆಕಟ್ಟೆಯಿಂದ ಈ ಕೊಳಗಳಿಗೆ ನೀರು ಪೂರೈಕೆಯಾಗುತ್ತದೆ. ಇವುಗಳಲ್ಲಿ ಕಂಗೊಳಿಸುವ ಸಾವಿರಾರು ತಾವರೆ ಪುಷ್ಪಗಳು ಸಹೃದಯರ ಕಣ್ಮನ ತಣಿಸುತ್ತವೆ.

ಭಾರತದಲ್ಲಿಯೇ ಅತಿ ದೊಡ್ಡದಾದ, ಸ್ವಯಂಪೋಷಿತ ತಾವರೆ ಕೊಳಗಳ ತಾಣ ಇದಾಗಿದೆ. ಇದನ್ನು 'ತಾವರೆ ಕಣಿವೆ' ಎಂದೂ ಕರೆಯುತ್ತಾರೆ. ಪ್ರಕೃತಿ ಪ್ರಿಯರಿಗೆ, ವನವಿಹಾರ ಬಯಸುವವರಿಗೆ, ಮನರಂಜನೆಗೆ ಹಾತೊರೆವ ಮಕ್ಕಳಿಗೆ, ಪ್ರೇಮಿಗಳಿಗೆ, ಒಟ್ಟಾಗಿ ಸಂಭ್ರಮಿಸಲು ಆಶಿಸುವ ಕುಟುಂಬಗಳಿಗೆ, ಛಾಯಾಗ್ರಾಹಕರಿಗೆ ಹೀಗೆ ವಿಭಿನ್ನ ಅಭಿರುಚಿಯ ಪ್ರವಾಸಿಗರೆಲ್ಲರಿಗೂ ಇಷ್ಟವಾಗುವ ಜಾಗ ಇದಾಗಿದೆ.

ತಾವರೆ ಕಣಿವೆ ಇಂದೋರ್ ರೈಲು ನಿಲ್ದಾಣದಿಂದ 25 ಕಿಲೋಮೀಟರ್ ಹಾಗು ವಿಮಾನ ನಿಲ್ದಾಣದಿಂದ 16 ಕಿಲೋಮೀಟರ್ ದೂರದಲ್ಲಿದೆ. ಸೂರ್ಯೋದಯ ಅಥವ ಸೂರ್ಯಾಸ್ತ ಸಮಯದಲ್ಲಿ ಕೊಳದಲ್ಲಿ ಅರಳಿರುವ ಅರವಿಂದ ಪುಷ್ಪಗಳು ಹೆಚ್ಚು ಅಂದವಾಗಿ ಕಾಣುತ್ತವೆ. ಅವುಗಳ ಸೌಂದರ್ಯವನ್ನು ವೀಕ್ಷಿಸಲು ಯಾವುದೇ ನಿರ್ಬಂಧವಾಗಲೀ ಶುಲ್ಕವಾಗಲೀ ಇಲ್ಲ.

ಉತ್ತಮ ರಸ್ತೆ, ಶುಭ್ರ ಶೌಚಾಲಯ, ಸ್ವಚ್ಛ ಕುಡಿಯುವ ನೀರು, ನಿರ್ಮಲ ಉಪಾಹಾರಗೃಹ, ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ತಾವರೆ ಕಣಿವೆ ಇನ್ನಷ್ಟು ಕಂಗೊಳಿಸಿ, ಪ್ರವಾಸಿಗರನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ.